Affairs at the Devanahalli Taluk:

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ ನಿನ್ನೆ ದಿವಸವೇ ನಾನೊಂದು ವಿಷಯವನ್ನು ಪ್ರಸ್ತಾಪ ಮಾಡ ಬೇಕೆಂದಿದ್ದೆ. ಆದರೆ ತಾವು ಪ್ರಶ್ನೋತ್ತರ ವೇಳೆ ಮುಗಿಯಿತೆಂದು ಹೇಳಿದ್ದೀರಿ, ದೇವನಹಳ್ಳಿ ತಾಲ್ಲೂಕಿ ನಲ್ಲಿರುವ ಗೋಮಾಳದಲ್ಲಿ ಇಬ್ಬರು ಮೂವರು ಜಮೀನನ್ನು ಆಕ್ರಮಿಸಿಕೊಂಡಿದ್ದಾರೆ.

ಅಧ್ಯಕ್ಷರು.—ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ. ಸರ್ಕಾರಕ್ಕೆ ಅದರ ಬಗ್ಗೆ ಕಾಗದ ಬರೆದು ತಿಳಿದುಕೊಳ್ಳಿ.

Newspaper item about seats in Medical Colleges

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಂಖ್ಯ ಮಂತ್ರಿಗಳವರು ಇಲ್ಲಿಯೇ ಇದ್ದಾರೆ, ನಿನ್ನೆ ದಿವಸ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ ಹಾಗೆ ಮೆಡಿಕಲ್ ಕಾಲೇಜ್‌ನಲ್ಲಿ 37 ಸೀಟುಗಳನ್ನು ಪದಚ್ಯುತಕ್ಕೆ ಸನ್ನಿವೇಶದಲ್ಲಿ ಏನು ಮಾಡಿದ್ದಾರೆ ಅದರ ಬಗ್ಗೆ ಸರ್ಕಾರದವರು ದಯಮಾಡಿ ವಿಚಾರಣೆಗೆ ಒಳಪಡಿಸಬೇಕು. ಆದರಲ್ಲಿ ಏನು ಸತ್ಯಾಂಶವಿದೆ ಎಂಬುದನ್ನು ಸಭೆಗೆ ತಿಳಿಸಬೇಕು. ಅದನ್ನು ಹಾಗೇ ಕೈ ಬಿಡಬಾರದು. ಅದರಲ್ಲಿ ಸರ್ಕಾರದವರು ಏನಾದರೂ ಲೋಪ ಮಾಡಿದ್ದಾರೆಯೇ, ಏನಾದರೂ ದುರುಪಯೋಗ ಪಡಿಸಿಕೊಂಡಿದ್ದಾರೆಯೇ ಎನ್ನುವ ಬಗ್ಗೆ ಬಹಿರಂಗ ಪಡಿಸಬೇಕಾದ್ದು ಅಗತ್ಯವಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಂಖ್ಯ ಮಂತ್ರಿಗಳವರು ಇದರ ಬಗ್ಗೆ ಸಂಪೂರ್ಣವಾಗಿ ಆ ಫೈಲನ್ನು ನೋಡಿ ಸ್ಟೇಟ್‌ಮೆಂಟ್ ಮಾಡುವುದು ಉತ್ತಮ.

Sri D. DEVARAJ URS.—I will look into the file I don't know anythink about it. ಫೈಲ್ ನೋಡಿದಾದ ಮೇಲೆ ಸ್ಟೇಟ್ ಮೆಂಟನ್ನು ಈ ಸಭೆಯ ಮುಂದಿಡಬೇಕಾದ ಅಗತ್ಯವಿದ್ದರೆ ಅದನ್ನು ಈ ಸಭೆಗೆ ತಿಳಿಸುವುದಕ್ಕೆ ಆಗದಿದ್ದರೆ, I can release it to the press.

Motion Under Rule 146.

re:— Charges against the CM and other Ministers pending before the Commissions of enquiry have no moral right to continue thus requiring them to vacat their offices.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಸಭಾಧ್ಯಕ್ಷಣಿಯವರೇ, 146 ನೇ ವಿಧಿಯ ಪ್ರಕಾರ.....

Sri SHEERNALY CHANDRASHEKAR.—I rise to a point of order. ಈಗ ಮಂತ್ರಿ ಮಂಡಲದ ಸಚಿವರ ಮೇಲೆ ಬಂದಿರತಕ್ಕಂಥ ಆಪಾದನೆಗಳೇನಿವೆ ಅವುಗಳ ಬಗ್ಗೆ ಗ್ರೋಯರ್ ಕಮೀಷನ್ ಆಯೋಗ ಮತ್ತು ಇಕ್ಬಾಲ್ ಹುಸೇನ್‌ರವರ ಆಯೋಗವನ್ನು ನೇಮಕ ಮಾಡಲಾಗಿದೆ. ವರು ಜುಡಿಷಿಯಲ್ ಅಥಾರಿಟಿಯಾಗಿರುವುದರಿಂದ ಅವರು ಅದನ್ನು ತೀರ್ಮಾನ ಮಾಡುತ್ತಾರೆ. ಆದುದರಿಂದ ಈಗ ಅದರ ಬಗ್ಗೆ ಪ್ರಸ್ತಾಪ ಮಾಡುವುದು ಸರಿಯೇ ?

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟ ದಿವಸ ನೀವು ಇರಲಿಲ್ಲವೇ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಇರಲಿಲ್ಲ. ಇವತ್ತು ಮಾನ್ಯ ದೇವೇಗೌಡರವರು ಏನೂ ಒಂದು ಮೋಷನ್ ತಂದಿದ್ದಾರೆ. ಅದು ನೇರವಾಗಿ ಕಮಿಷನ್‌ನ ಮೇಲೆ ಪರಿಣಾಮ ಬೀರುತ್ತದೆ. ಈ ವಿಷಯದ ಮೇಲೆ ಇಲ್ಲಿ ಚರ್ಚೆ ಪ್ರಾರಂಭ ಮಾಡಿದರೆ ಎಲ್ಲಾ ವಿಷಯಗಳ ಬಗ್ಗೆಯೂ ಇಲ್ಲಿ ಚರ್ಚೆ ಪ್ರಾರಂಭವಾಗುತ್ತದೆ. ಆದುದರಿಂದ ಅದು ಸಬ್‌ಜ್ಯುಡಿಸ್ ಆಗುವುದಿಲ್ಲವೇ.